ವ್ಯವಸಾಯದ ಫಾರಮ್ಮಿನಿಂದಲೇ ಆಹಾರ, ಎಂದರೆ, ಹುರುಳಿ ಮುಂತಾದುವನ್ನು ಬೆಳೆಯುವುದಕ್ಕೆ ಏರ್ಪಾಡು ಮಾಡಿದ್ದಾರೆ: ಮತ್ತು ಇಲಾಖೆಯವರು Concentrates ರಿಲೀಸ್ ಮಾಡಿದ್ದಾರೆ. ಅಲ್ಲಿ ಅಮೃತಮಹಲ್ ದನಗಳನ್ನುಮಾತ್ರ ಇಟ್ಟುಕೊಳ್ಳುವುದು; ಬೇರೆ ದನಗಳನ್ನಿಡಲು ಅವಕಾಶವಿಲ್ಲ. ಆದರೂ ಕೆಲವು ಮಲೆನಾಡು ಗಿಡ್ಡಗಳಿದ್ದವು, ಅವನ್ನೂ ತೆಗೆದುಹಾಕಲಾಯಿತು. ಅಲ್ಲದೆ ಕೆಲವು ಏರ್ಪಾಡುಗಳನ್ನು ಮಾಡಿ ಅದರ ಆದಾಯದಿಂದಲೇ ಅದರ ಖರ್ಚನ್ನು ಸರಿದೂಗಿಸುವುದಕ್ಕೆ ಏರ್ಪಾಡುಮಾಡುತ್ತಿದ್ದೇವೆ. ಇನ್ನು ಮುಂದೆ ಇದು ಲಾಭದಾಯಕವಾಗಬಹುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈಚೆಗೆ ಕುರಿ ಕುಪ್ಪೆ ಫಾರಂನಲ್ಲಿಯೂ ಇದೇ ರೀತಿ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಇದೇ ತತ್ವದ ಮೇಲೆ ಅದನ್ನೂ self-supporting ಮಾಡಬೇಕೆಂದು ಮಾಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಫಾರಮ್ಮುಗಳನ್ನೆಲ್ಲಾ ಒಬ್ಬರೇ ಆಫೀಸರ ಕೈಗೆ ಕೊಡುವುದರ ಬದಲು Animal Husbandry ದಾಬನ್ನೇ ಪ್ರತ್ಯೇಕವಾಗಿ ಒಬ್ಬ ಆಫೀಸರ ಕೈಗೆ ವಹಿಸುವುದು ಯುಕ್ತವಲ್ಲವೇ?

ಡಾ॥ ಆರ್. ನಾಗನಗೌಡ.—ಡೈರೆಕ್ಟರವರು ಆ ರೀತಿಯಾಗಿ ಏನೂ ಬರೆದು ಕಳುಹಿಸಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಆಫೀಸರ ಕೈಕೆಳಗೆ ಅವರಷ್ಟಯೇ ನಂಬಳ ಪಡೆಯುತ್ತಿರುವ ಆಫೀಸರುಗಳು ಮತ್ತು ಅಸಿಸ್ಟೆಂಟರುಗಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಬಂದಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆದ್ದರಿಂದ ಈ anomaly ಯನ್ನು ಸರಿಪಡಿಸುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಅವರಿಗೆ ಆ ಇಲಾಖೆಯಲ್ಲೇ ಕ್ರಮೇಣ ಅವರವರ ಗ್ರೇಡುಗಳ ಪ್ರಕಾರ ಇಂಕ್ರಿಮೆಂಟುಗಳು ವರ್ತು ಬಡ್ತಿ ಸಿಕ್ಕುತ್ತವೆ.

ಶ್ರೀ ಬಿ. ರಾಚೆಯ್ಯ.—ಈಗ ತಾನೆ ಮಾನ್ಯಮಂತ್ರಿಗಳು ಹೇಳಿದರು, ಆ ಆಫೀಸರ ಕೈಕೆಳಗೆ ಅದೇ ನಂಬಳ ಬರುವವರು ಇನ್ನೂ ಕೆಲವರು ಇದ್ದಾರೆ ಎಂದು ಅವರುಗಳು ಯಾರು?

ಡಾ॥ ಆರ್. ನಾಗನಗೌಡ.—ಅವರುಗಳ ಹೆಸರು ಗೊತ್ತಿಲ್ಲ. ಅದೇ ಗ್ರೇಡಿನಲ್ಲಿರುವ ಇನ್ನೂ ಕೆಲವು ಅಸಿಸ್ಟೆಂಟ್ ಡೈರೆಕ್ಟರುಗಳು ಅಜ್ಜಂಪುರದಲ್ಲಿದ್ದಾರೆಂಬುದು ಗೊತ್ತು.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಇವರ ಕೈಕೆಳಗೆ ಅವರಿದ್ದಾರೋ ಅಥವಾ ಅವರ ಕೈಕೆಳಗೆ ಇವರಿದ್ದಾರೋ? ಇದನ್ನುನಿರ್ಣಯಿಸುವುದು ಹೇಗೆ?

ಡಾ॥ ಆರ್. ನಾಗನಗೌಡ.—ಇಲಾಖೆಯಲ್ಲಿ ಅದನ್ನೆಲ್ಲಾ ನಿರ್ಣಯಿಸುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಜಾನುವಾರುಗಳಿಗೆ ಮೇಯುವುದಕ್ಕೆ ಎಷ್ಟು ರಾಸುಗಳಿಗೆ ಒಂದು ಎಕರೆಯಂತೆ ನಿಗದಿಮಾಡಿದ್ದೀರಿ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ 100 ರಾಸುಗಳಿಗೆ ಒಂದು ಎಕರೆ ಇರಬೇಕೆಂದು ಗೊತ್ತುಮಾಡಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮೇಕೆಗಳಿಗೆ?

ಡಾ॥ ಆರ್. ನಾಗನಗೌಡ.—ಕುರಿಗಳ ವಿಷಯದಲ್ಲಿ ಎರಡು ಕುರಿಗಳಿಗೆ ಒಂದು ಹಸು ಸಮವಾಗಿರುತ್ತದೆಂದು ಗೊತ್ತುಮಾಡಿದೆ. ಮೇಕೆಗಳನ್ನು ಮಟ್ಟಿಗೆ ಅರಣ್ಯಶಾಖೆಯವರು ಸೇರಿಸುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮೇಕೆಗಳಿಗೋಸ್ಕರ ವಾಗಿಯೇ ಪ್ರತ್ಯೇಕವಾಗಿ ಅರಣ್ಯದ ಸ್ವಲ್ಪ ಭಾಗವನ್ನು ಬಿಟ್ಟುಕೊಡಬೇಕೆಂದು ಹೇಳಿ ತಮ್ಮಲ್ಲಿಗೆ ಒಂದು ನಿಯೋಗಬಂದಿರಲಿಲ್ಲವೇ?

ಡಾ॥ ಆರ್. ನಾಗನಗೌಡ.—ಬಂದಿದ್ದರು. ಆದರೆ ನನಗೆ ತಿಳಿದಮಟ್ಟಿಗೆ ಮೇಕೆಗಳಿಗೆ ಹಿಂದೂ ದೇಶದಲ್ಲಿ ಯಾವ ಕಾಡಿನಲ್ಲಿಯೂ ಮೇಯಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ಮೇಕೆಗಳನ್ನು ಬಿಟ್ಟರೆ ಗಿಡಗಳು ಬೆಳೆಯುವುದಿಲ್ಲವೆಂದು ಇಲಾಖೆಯವರು ಅಭಿಪ್ರಾಯಪಡುತ್ತಾರೆ ಆದರೂ ನಿಯೋಗದವರು ಹೇಳಿದ ವಿಷಯವನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಪರಿಶೀಲನೆ ಮಾಡುವುದಾಗಿ ಹೇಳಿದಿರಿ. ಆವಷ್ಟು ಜಾಗ್ರತೆಯಾಗಿ ಪರಿಶೀಲನೆ ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಆ ಪ್ರಶ್ನೆ ಸ್ವಲ್ಪ ಕಠಿಣವಾದುದು. It affects our major problems. ಆದಷ್ಟುಮಟ್ಟಿಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ ಹನುಮಯ್ಯ.—ದನ, ಕುರಿ, ಮೇಕೆಗಳಿಗೆ ಇಷ್ಟು ಜಮೀನಿರಬೇಕೆಂದು limit ಗೊತ್ತುಮಾಡಿರುವುದಾಗಿ ತಿಳಿಸಿದಿರಿ. ಅದೇ ಪ್ರಕಾರ ಜನರಿಗೂ ಜಮೀನುಗಳನ್ನು ಇಟ್ಟುಕೊಳ್ಳುವುದರಲ್ಲಿ ನಿಗದಿಯೇನಾದರೂ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಜನಗಳು ಉಪವಾಸವಿದ್ದರೂ ಚಿಂತೆಯಿಲ್ಲವೆಂದು ಭಾವಿಸಿ ದನಗಳಿಗೂ ಕುರಿಗಳಿಗೂ ಗೋಮಾಳಕ್ಕೇರ್ಪಾಡು ಮಾಡಿರತಕ್ಕದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡರು.—ದನಗಳಿರುವುದೇ ಜನಗಳಿಗಾಗಿ. ತಾವು ದೊಡ್ಡ ರೈತರಾಗಿ ತಮಗಿದು ಗೊತ್ತಿಲ್ಲದೆ ಇಲ್ಲ. ದನಗಳ ಅವಶ್ಯಕತೆಯೆಷ್ಟೆಂಬುದು ತಮಗೇ ಗೊತ್ತು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಜನಗಳನ್ನು ಕಾಪಾಡತಕ್ಕ ಅವಶ್ಯಕತೆಯಿಲ್ಲವೆಂದು ತಮ್ಮ ಭಾವನೆಯೇ?

ಅಧ್ಯಕ್ಷರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

Cattle Wealth Schemes.

Q.—107. Sri L. SIDDAPPA (Channagiri).—

Will the Government be pleased to state:—

(*a*) the schemes that were in force in the State for the development of cattle wealth under the post-war development scheme;

(*b*) the various schemes that were formulated for implementation during the First Five-Year Plan for the development of cattle wealth;

(*c*) of the post-war development schemes, the schemes that have continued during the First Plan period and the schemes that have been given up?

A.—**Dr. R. NAGAN GOWDA** (Minister for Agriculture).—

(*a*) (1) Opening of 105 Veterinary Dispensaries at the rate of 21 Dispensaries per year in 5 years.

2. Training of 100 Veterinary Graduates in various Veterinary Institutions in India.

3. Post-Graduate Training in foreign countries.

4. Training of 50 Stockmen per year for 5 years.

5. Training of 15 candidates in Dairy Science at the rate of 3 candidates per year.

6. Post-Graduate Training in Animal Husbandry at Izatnagar.

7. Livestock Improvement Scheme—Distribution of bulls free of cost to cattle owners, and payment of premia of rupees one hundred to ryots who possess good bulls.

8. Expansion of Cattle Breeding Station, Ajjampur.

9. Supply of mineral supplements to Malnad Cattle.

10. Scheme for grading up of Malnad Giddas with Sindhi Bulls.

11. Scheme for control of parasitic diseases among cattle and sheep.

12. Scheme for establishment of Milk *cum* Bull Farm at Hessarghatta.

13. Establishment of a dry cattle farm at Hessarghatta.

14. Starting of Artificial Insemination Centres.

(*b*) 1. Composite Livestock Farm and Research Station at Hessarghatta—Reorganised and brought over to First Five-Year Plan.

2. Cattle Breeding Station, Ajjampur—Reorganised and brought over to First Five-Year Plan.

3. Combined Sheep and Cattle Farm, Kurikuppi—Reorganised and brought over to First Five-Year Plan.

4. Poultry Development—Distribution of fertile eggs and supply of pedigree birds.

5. Key Village Scheme.

6. Animal Husbandry Development in Community Project and N.E.S. Blocks.

7. Opening of Artificial Insemination Centres.

8. Livestock Improvement Scheme: (*a*) Distribution of free bulls (*b*) Award of Premium to approved bulls.

9. Gosadan Scheme.

10. Eradication of Rinderpest in the State.

11. Campaign against Ranikhet Disease (work intensified).

12. Opening of Veterinary Institutions.

(*c*) 1. Composite Livestock Farm and Research Station, Hessarghatta.

2. Cattle Breeding Station, Ajjampur.

3. Poultry Development.

4. Opening of Artificial Insemination Centres.

5. Livestock Improvement Scheme.

6. Campaign against Ranikhet.

7. Opening of more Veterinary Institutions—Veterinary Aid.

The Scheme for the supply of mineral supplement to Malnad Cattle.

Sri L. SIDDAPPA.— In answer (c) regarding the postwar development schemes, the schemes that have been continued during the First Plan period and the schemes that have been given up, you have given 7 items that are being continued ಅಲ್ಲಿಗೆ ಮಿಕ್ಕದ್ದನ್ನೆಲ್ಲಾ ಕೈಬಿಟ್ಟಿದೆಯೆಂದರ್ಥವೇ?

Dr. R. NAGAN GOWDA.—To question (c) we have stated as 1,2,3,4,5,6, and 7 items continued, ಮಿಕ್ಕವೂಕೂಡ (c) (i) ನಲ್ಲಿಯೇ ಬರುತ್ತವೆ. The scheme for the supply of Malnad Cattle has been given up. It has been put in a different way.

Sri L. SIDDAPPAi—In answer to clause (a) you have stated 14 schemes; shall I take it that the other 7 items have been given up?

Dr. R. NAGAN GOWDA.—ಹಾಗಲ್ಲ, ಕೆಲವು. Now, for instance, Composite Livestock Farm and Research Station at Hessarghatta. Establishment of a dry cattle farm at Hessarghatta; starting of Artificial Insemination Centres *vide* items 13 and 14, and then scheme for establishment of Milk *cum* Bull Farm at Hessarghatta, they have been included under one Composite Livestock Farm and Research Station, Hessarghatta. Though the number is different, most of them have been included in Hessarghatta Farm.

Sri L. SIDDAPPA.—In that case, shall I take that all the 14 items are continued now?

Dr. R. NAGAN GOWDA.—No, not exactly. You see the other items 1, 2, 3, 4, 5 and 6 which pertain to training of personnel and though the number has been varying, we have been sending more students for training in various other Colleges, but recently no students have been sent to foreign contries for training.

Sri L. SIDDAPPA.—In all, how many dispensaries have been opened during these seven years, Sir?

Dr. R. NAGAN GOWDA.—I am not in a position to give the exact number. But during the last two years we have not opened any, because we have reached a stage where, with few more additions which will be done within the next Five-year Plan, we will be having almost an ideal plan that has been envisaged, *viz.*, for every 25,000 cattle there will be one dispensary.

Sri L. SIDDAPPA.—You have set the target as 105 Veterinary Dispensaries at the rate of 21 dispensaries; shall I take it that you have already reached the figure of 105?

Dr. R. NAGAN GOWDA.—Now I have not got definite information for that; that is my difficulty.

12-30 P.M.

Sri L. SIDDAPPA.—Is the scheme of training Stockmen being continued?

Dr. R. NAGAN GOWDA.—Whenever we require we have been training Stockmen.

Sri L. SIDDAPPA.—Not a continuous process?

Dr. R. NAGAN GOWDA.—It is a continuous process. We have been training those that come under training, continuously.

Sri L. SIDDAPPA.—"Livestock Improvement Scheme–Distribution of bulls free of cost and payment of premia..." is it being continued?

Dr. R. NAGAN GOWDA.—Yes, it is also being continued.

Sri L. SIDDAPPA.—Will you furnish me the information as to in how many cases this premium has been paid for the past five years and how many breeding bulls have been supplied during the past five years?

Dr. R. NAGAN GOWDA.—Bulls were distributed among selected breeders as follows: *1945 46* bulls distributed free of cost...112. Premium bulls...31. *1946–47*: bulls free of cost...123 and premium bulls...43. *1947–48*: bulls free of cost...66 and premium bulls...16. *1948–49*: 84 and 36. *1949–50*: 49 and 4. I have not got the figures for the following years, but we have been distributing some bulls for both the systems in the following years as well.

Sri L. SIDDAPPA.—You have figures till what year?

Dr. R. NAGAN GOWDA.—For the years from 1951–52 up to the present year the number of breeding bulls supplied to village panchayats are as follows:

1951–52	...	28
1952–53	...	12
1953–54	...	10
1954–55	...	8

Since 1950 we have introduced also, as you know, artificial insemination centres in two places; one at Hesaraghatta and the other at Ajjampur and there are proposals to start some more hereafter. That would take care of the breeding work much more competently than merely the supply of breeding bulls.

Sri L. SIDDAPPA.—That will only solve the problem within a radius of 5 miles from the Centre.

Dr. R. NAGAN GOWDA.—At present, the proposal is to have an artificial insemination centre at each district headquarters and then later on in taluk head quarters. Because, that is the most economical and the best way of doing it.

Sri L. SIDDAPPA.—With regard to Livestock Improvement Scheme, Distribution of free bulls and payment of premium, was it contemplated that it should be accelerated?

Dr. R. NAGAN GOWDA.—It is proposed to have these centres not only at district headquarters but also at taluk headquarters. That will be a quicker way of doing it and easier and less costly. It is becoming very popular.

Sri L. SIDDAPPA.—New artificial insemination centres have been opened in two places, but still no case has been made out for giving up this scheme of distributing breeding bulls and paying premium for breeding bulls?

Dr. R. NAGAN GOWDA.—Since at present we have artificial insemination centres only in two places, we will continue to distribute breeding bulls.

Sri L. SIDDAPPA.—The number of breeding bulls during the past five years compares very poorly with the number of bulls distributed in 1945-46 and 1946-47.

Dr. R. NAGAN GOWDA.—Since then we have got one artificial insemination centre in the community project block in Siralkoppa and we have also been supplying some breeding bulls to the N.E.S. Block.

Sri L. SIDDAPPA.—At least having regard to the fact that these insemination centres do not cover the entire State, will the Government consider the feasibility of accelerating the scheme of distributing breeding bulls?

Dr. R. NAGAN GOWDA.—That will be considered and we have been doing it to some extent. Both the schemes will be carried on simultaneously so that the work of improving the breeds of cattle is carried on with vigour.

Sri A. V. NARASIMA REDDY.—Is not the stationing of breeding bulls costlier than the starting of artificial insemination centres?

Dr. R. NAGAN GOWDA.—Opening an artificial insemination centre is more economical.

Sri A. V. NARASIMHA REDDY.—Therefore, is it not desirable that they should give more attention to starting these centres on a large scale?

Dr. R. NAGAN GOWDA.—We have got a scheme for the Second Five-year Plan wherein we will reach the required number of artificial insemination centres. But as I understood from Hon'ble Member Sri L. Siddappa, the idea is, before that is accomplised; noarea should be left without breeding bulls. With that I agree.

ಶ್ರೀ ಕೆ. ಲಕ್ಕಪ್ಪ.—ಮಲೆನಾಡಿನಲ್ಲಿ ಗಿಡ್ಡ ಎತ್ತುಗಳ ಅಭಿವೃದ್ಧಿಗಾಗಿ ಈ ಬ್ರೀಡಿಂಗ್ ಬುಲ್ಸ್‌ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ಯೋಜನೆಯನ್ನು ಜಾರಿಗೆ ತರತಕ್ಕ ಬಗ್ಗೆ ತಾವು ಈವರೆಗೆ ಎಷ್ಟು ಸಿಂಧಿ ಗೂಳಿಗಳನ್ನು ಮಲೆನಾಡಿಗೆ ಸರಬರಾಯಿಮಾಡಿದ್ದೀರಿ?

Dr. R. NAGAN GOWDA.—Right now I have not got the number of Sindhi bulls that have been distributed.

ಶ್ರೀ ಕೆ. ಲಕ್ಕಪ್ಪ.—ಹೋಗಲಿ. ಆ ರೀತಿ ಸರಬರಾಜುಮಾಡುತ್ತಿದ್ದೀರಾ?

ಡಾ॥ ಆರ್. ನಾಗನಗೌಡ.—ಮಾಡುತ್ತಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಹೇಗೆ ಮಾಡುತ್ತಿದ್ದೀರಿ? ಉಚಿತವಾಗಿಯೋ ಅಥವಾ ಆನ್ವತ್ಕೈಗಳ ಮುಖಾಂತರವೋ?

ಡಾ॥ ಆರ್. ನಾಗನಗೌಡ.—ಎರಡು ವಿಧದಲ್ಲೂ ಅಂದರೆ ಉಚಿತವಾಗಿ ಮತ್ತು ಪ್ರೀಮಿಯಂ ಪ್ರಕಾರ ಸರಬರಾಯಿ ಮಾಡಲಾಗುತ್ತಿದೆ.

ಶ್ರೀ ಕೆ. ಲಕ್ಕಪ್ಪ.—ಪ್ರತಿಯೊಂದು ಜಿಲ್ಲಾ ಕನಬೆಯಲ್ಲೂ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸುತ್ತೀರಿ?

ಡಾ॥ ಆರ್. ನಾಗನಗೌಡ.—ಅದನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಹಾಸನ ಜಿಲ್ಲೆಗೆ ಈ ಬ್ರೀಡಿಂಗ್ ಬುಲ್ಸ್ ಸೆಂಟರನ್ನು ಕೊಡಬೇಕೆಂದು ಕೇಳುತ್ತಿಲ್ಲವೇ?

ಡಾ॥ ಆರ್. ನಾಗನಗೌಡ—ಹೌದು, ಕೇಳುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಯಾವಾಗ ಕೊಡುತ್ತೀರಿ?

Dr. R. NAGAN GOWDA.—As soon as possible we will take it up.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಇಲ್ಲಿ ಉತ್ತರದಲ್ಲಿ ಹಾಲು ಕೊಡುವ ಹಸುಗಳನ್ನು ಸಾಕುವ ಯೋಜನೆ ಎಂದು ಹೇಳಿದ್ದೀರಿ. ಇದನ್ನು ಯಾವಾಗ ಜಾರಿಗೆ ತರುತ್ತೀರಿ?

ಡಾ॥ ಆರ್. ನಾಗನಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ.

It will take the shape of co-op rative dairy union for supply of milk to the big cities.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ತಾವು ಇಲ್ಲಿಯವರೆಗೂ ಕೈಗೊಂಡಿರುವ ಪ್ರಯತ್ನಗಳಿಂದ ಏನಾದರೂ ನಂಸ್ಥಾನದಲ್ಲಿ ಈ ಹಾಲಿನ ಸರಬರಾಯಿಯ ವ್ಯವಸ್ಥೆ ಅನುಕೂಲ ಹೊಂದಿದೆಯೇ?

ಡಾ॥ ಆರ್. ನಾಗನಗೌಡ.—ಹೌದು, ಹೊಂದಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಕೇವಲ ಪಟ್ಟಣಗಳಲ್ಲಿ ಮಾತ್ರ, ಎಂದರೆ, ಈ ಬೆಂಗಳೂರು ನಗರ ಇಂಥ ಪಟ್ಟಣಗಳಲ್ಲಿ ಮಾತ್ರ ಉತ್ತಮಗೊಂಡಿದೆಯೇ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿ ಏನೂ ಪ್ರಯೋಜನವಾಗಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೆ?

ಡಾ॥ಆರ್. ನಾಗನಗೌಡ.—ಹೌದು, ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟು ಉತ್ತಮಗೊಂಡಿಲ್ಲ. ಅವರು ಕೇವಲ ಹಳ್ಳಿಕಾರ್ ಜಾತಿಯ ದನಗಳನ್ನೇ ಸಾಕುತ್ತಾ, ಈ ಡೈರಿ ಫಾರಮ್ಮಿಗೆ ಅವರು ಅಷ್ಟಾಗಿ ಮನಸ್ಸು ಕೊಟ್ಟಿಲ್ಲ. ಅಲ್ಲಿಯೂ ಪ್ರಯತ್ನಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಹಾಲಿನ ಪುಡಿಯನ್ನು ಉಪಯೋಗಿಸುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಾಲಿನಪುಡಿಯನ್ನು ಉಪಯೋಗಿಸುತ್ತಾ ಇರುವುದರಿಂದ ಅನೇಕ ಜನರಿಗೆ ರೋಗ

ಗಳು ಬಂದು ಅನ್ಯತ್ರಕ್ಕೆ ಸೇರುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಡಾ|| ಆರ್. ನಾಗನಗೌಡ.—ಇಲ್ಲ.

Admissions to Colleges.

Q.—115. **Sri V. R. NAIDU** (Malleswaram).—

Will the Government be pleased to state :—

(*a*) whether it has come to their notice that of late, particularly this year, many candidates were disappointed since they could not secure seats in coll g s as also Engineering and Medical Colleges ;

(*b*) the rules that were followed by the Committees appointed by Government in giving seats ;

(*c*) whether the establishment of Intermediate Colleges in some more places and one more each of Engineering and Medical Colleges in Bangalore has been included in the Second Five-Year Plan to obviate this dearth for seats ;

(*d*) if not, why it should not be included ?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) A set of rules is placed on the table of the House.

(*c*) The Second Plan in the University Sector is under consideration.

(*d*) Does not arise in view of the answer to (*c*).

ಶ್ರೀ ವಿ. ಆರ್. ನಾಯ್ಡು.—ಕಾಲೇಜುಗಳಲ್ಲಿ ಸೀಟುಗಳ ಅಭಾವ ಇದೆ ಎಂದು ಬಹಳ ಜನಗಳು ಸರ್ಕಾರದ ವರನ್ನು ಪ್ರಾರ್ಥಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ಆರ್. ನಾಯ್ಡು.—ಇದಕ್ಕೆ ಏನು ಕಾರಣ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾಭ್ಯಾಸ ಬಹಳವಾಗಿ ಹೆಚ್ಚಾಗುತ್ತಾ ಇರುವುದರಿಂದ ಈಗ ಇರತಕ್ಕ institution ಗಳಲ್ಲಿ ಕೇಳುವವರೆಲ್ಲರಿಗೂ ಸೀಟುಗಳನ್ನು ಕೊಡುವುದು ಕಷ್ಟ.

ಶ್ರೀ ವಿ. ಆರ್. ನಾಯ್ಡು.—ಇದಕ್ಕೆ ಪರಿಹಾರಮಾರ್ಗವನ್ನು ಸರ್ಕಾರದವರು ಯೋಚನೆಮಾಡಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಹೊಸದಾಗಿ ಮೆಡಿಕಲ್ ಕಾಲೇಜನ್ನು ಸ್ಥಾಪನೆಮಾಡಿರುವುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಅದಕ್ಕೆ ಒಂದು ಸಮಿತಿ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೆಂಗಳೂರು ಕಾಲೇಜಿಗೆ ಸಮಿತಿ ಇದೆ.

ಶ್ರೀ ವಿ. ಆರ್. ನಾಯ್ಡು.—ಸಮಿತಿಯ ಸದಸ್ಯರನ್ನು ಚುನಾವಣೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿನ ಕೆಲಸವನ್ನು ನಿರ್ವಹಣೆಮಾಡುವುದಕ್ಕೆ ಯೋಗ್ಯತೆ ಇರುವವರನ್ನು ಚುನಾಯಿಸಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಪ್ಯೂನರ್ ಕಮ್ಯೂನಿಟಿಯವರು ಆ ಸಮಿತಿಯಲ್ಲಿ ಇದ್ದಾರೆಯೇ ?

ಶ್ರೀ ಎ. ಜಿ ರಾಮಚಂದ್ರರಾವ್.—ನನಗೆ ಜ್ಞಾಪಕವಿರುವ ಹಾಗೆ ಬಹಳ ಜನರಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ವಿದ್ಯಾರ್ಥಿಗಳಿಗೆ ಇರತಕ್ಕ ತೊಂದರೆಗಳನ್ನು ವರ್ಷವರ್ಷವೂ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ Intermediate College ಅಥವಾ Engineering College ಗಳನ್ನು ಮಾಲ್ಲೇಶ್ವರದ ಬಡಾವಣೆಗಳಲ್ಲಿ ಸ್ಥಾಪನೆಮಾಡಲು ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—Intermediate College ಮಾಡುವುದೇ ಬಹಳ ಕಷ್ಟವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—ಮೆಡಿಕಲ್ ಕಾಲೇಜು ಸ್ಥಾಪನೆಯಾಗಿರುವುದು ಖಾಸಗಿ ಕಾಲೇಜ್ ಅಥವಾ ಸರ್ಕಾರದ ಕಾಲೇಜ್ ಆಗಿದೆಯೇ ?

Sri A. G. RAMACHANDRA RAO.—It is an aided institution.

ಶ್ರೀ ವಿ. ವಿ. ನರಸಿಂಹರೆಡ್ಡಿ.—Aided institution ಗೆ ನರಕಾರದವರು ಸಮಿತಿ ನೇಮಿಸಲು ಅವಕಾಶ ಇದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ institution management ವಿಚಾರದಲ್ಲಿ ಸರ್ಕಾರದವರು ಪತ್ರವ್ಯವಹಾರ ನಡೆಸಿ ಒಂದು ಸೂಕ್ತವಾಗಿರತಕ್ಕ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—ಎಂದರೆ ಖಾಸಗೀ ಜನರು ಸೇರಿ ಸಂಸ್ಥೆ ಪ್ರಾರಂಭಮಾಡಿದರು. ನರಕಾರದವರು ಅದಕ್ಕೆ recognition ಕೊಟ್ಟು ಗ್ರಾಂಟು ಕೊಟ್ಟರು. ಆದರೆ ನರಕಾರದ ಹತೋಟಿ ಸಮಿತಿಯ ಮೇಲೆ ಇರುವುದಿಲ್ಲ, ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—University regulations ಅನುಸಾರವಾಗಿ ನಾವು ನಡೆಯುತ್ತೇವೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—University ಯವರು ಹೇಗೆ ತಮ್ಮ ಕಾಲೇಜನ್ನು ನಡೆಸುತ್ತಾರೋ ಅದೇ ರೀತಿ recognition ಕೊಡಬೇಕಾದರೆ ಈ ಸಂಸ್ಥೆಯನ್ನೂ ನಡೆಸಬೇಕಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—University regulation ಪ್ರಕಾರವೇ ನಡೆಯಬೇಕಾಗುತ್ತದೆ.

ಶ್ರೀ ವಿ. ವಿ. ನರಸಿಂಹರೆಡ್ಡಿ.—Admission ಮೊದಲುಗೊಂಡು audit ಮುಂತಾದ ಎಲ್ಲ ವಿಷಯಗಳಲ್ಲಿಯೂ ಯೂನಿವರ್ಸಿಟಿಯ ಕ್ಯಾಲೆಂಡರನ್ನು ಅನುಸರಿಸಬೇಕು, ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯೂನಿವರ್ಸಿಟಿ ಕ್ಯಾಲೆಂಡರನ್ನೇ ಅವರು ಅನುಸರಿಸುವುದು. ಅದು ಒಂದು affiliated institution ಆದ್ದರಿಂದ affiliated institutions ಗೆ ಯಾವ ಯಾವ regulations ಇವೆಯೋ ಅವುಗಳನ್ನು ಅನುಸರಿಸುತ್ತಾರೆ.